

# ಪ್ರಪಂಚದ ಅತೀ ಚಿಕ್ಕ ಅಕ್ವೇರಿಯಂ

ಈ ಚಿತ್ರದಲ್ಲಿರುವುದು ಪ್ರಪಂಚದ ಅತೀ ಪುಟ್ಟ ಅಕ್ವೇರಿಯಂ. ಅಂಗೈಯಲ್ಲಿ ಹಿಡಿದುಕೊಳ್ಳಬಹುದಾದ ಈ ಅಕ್ವೇರಿಯಂನಲ್ಲಿ ಹಿಡಿಸುವುದು ಬರೀ ಎರಡು ಚಮಚ ನೀರಷ್ಟೇ! ಈ ಚಿಕ್ಕ ಮತ್ಸ್ಯಾಲಯವನ್ನು ಗಾಜಿನಿಂದ ತಯಾರಿಸಲಾಗಿದೆ.

ಇದು 30 ಮಿ.ಮೀ. ಅಗಲ, 24 ಮಿ.ಮೀ. ಎತ್ತರ ಮತ್ತು 14 ಮಿ.ಮೀಟರ್ ಆಳವಿದೆ. ಜೀಬ್ರಾ ಜಾತಿಯ ಅತೀ ಚಿಕ್ಕ ಗಾತ್ರದ ಮೀನನ್ನು ಮಿನಿಯೇಚರ್ ಬಲೆಯ ಸಹಾಯದಿಂದ ಇದರಲ್ಲಿ ಬಿಡಲಾಗಿದೆ. ಹಾಗೇ ಪುಟ್ಟ ಸಸ್ಯ ಮತ್ತು ಸಣ್ಣ ಕಲ್ಲುಗಳನ್ನೂ ಇದರಲ್ಲಿ ಜೋಡಿಸಲಾಗಿದೆ. ಈ ಅಕ್ವೇರಿಯಂಗೆ ನೀರನ್ನು ಇಂಜೆಕ್ಷನ್ ಸಿರಿಂಜ್ ಮೂಲಕ ನಿಧಾನವಾಗಿ ತುಂಬಿಸಬೇಕು.

ಇಷ್ಟು ಸೂಕ್ಷ್ಮ ಅಕ್ವೇರಿಯಂ ತಯಾರಿಸಿದವನು ರಷ್ಯಾ ದೇಶದ ಅನಾಟೋಲಿ ಕೊನೆನ್ಕೊ. ಮೈಕ್ರೋ ಮಿನಿಯೇಚರ್ ಕಲೆಯಲ್ಲಿ ಈತ ಜನಪ್ರಿಯತೆ ಗಳಿಸಿದ್ದಾನೆ. ಅಕ್ಕಿ ಕಾಳು, ಗಸಗಸೆ ಅಷ್ಟೇಕೆ ಕೂದಲಿನ ಮೇಲೆಯೂ ಬರೆಯುವ ಸೂಕ್ಷ್ಮತೆಯನ್ನು ಈತ ತೋರಿಸಿದ್ದಾನೆ.

1996ರಲ್ಲಿ ಪ್ರಪಂಚದ ಅತ್ಯಂತ ಚಿಕ್ಕ ಅಳತೆಯ ಪುಸ್ತಕವನ್ನು ತಯಾರಿಸಿ ಗಿನ್ನಿಸ್ ವಿಶ್ವದಾಖಲೆಯನ್ನು ಈತ ಮುಡಿಗೇರಿಸಿಕೊಂಡಿದ್ದಾನೆ. ಈತನ ಕೈಚಳಕದಿಂದ ತಯಾರಾಗಿರುವ ಈ ಸುಂದರ ಮಿನಿ ಅಕ್ವೇರಿಯಂ ಇವನ ಕಲಾಕೌಶಲಕ್ಕೆ ಹಿಡಿದ ಕೈಗನ್ನಡಿ.

■ ವಿದ್ಯಾ ವಿ ಹಾಲಭಾವಿ



